OS No. 39/2017
DW-1

(ಇಂದು ದಿಃ 29-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

**ಮುಂದುವರೆದ ಮುಖ್ಯ ವಿಚಾರಣೆ :- ಶ್ರೀ.BSS ವಕೀಲರಿಂದ :-**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯಾಗಿ ಪ್ರತಿಜ್ಞಾ ಪತ್ರವನ್ನು ಸಲ್ಲಿಸಿರುತ್ತೇನೆ.. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನ್ನ ತಿಳುವಳಿಕೆಯ ಮೇರೆಗೆ ಬರೆಯಲ್ಪಟ್ಟಿರುತ್ತವೆ ಮತ್ತು ಅವು ಸತ್ಯವಾಗಿರುತ್ತವೆ. ಪ್ರತಿಜ್ಞಾ ಪತ್ರಕ್ಕೆ ಸಹಿ ಮಾಡಿರುತ್ತೇನೆ.

- ದಿಃ 19-07-1972 ರ ನೋಂದಣಿ ಇಲ್ಲದ ಖರೀದಿ ಪತ್ರದ ಮೂಲ ಪ್ರತಿಯನ್ನು ಮತ್ತು ರಶೀದಿಯ ಮೂಲ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಸದರಿ 2 ದಾಖಲಾತಿಗಳು ಉರ್ದು ಬಾಷೆಯಲ್ಲಿರುವ ಕಾರಣ ಅವುಗಳ ಇಂಗ್ಲಿಷ ಭಾಷಾಂತರ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. ದಿಃ 19-07-1972 ರ ಕ್ರಯ ಪತ್ರವನ್ನು ನಿಷಾನೆಯಾಗಿ ಗುರುತಿಸಲು ವಾದಿ ಪರ ವಕೀಲರು ತಕರಾರು ಮಾಡಿರುತ್ತಾರೆ ಆಗ ಸಾಕ್ಷಿಯ ಪರ ವಕೀಲರು ಸಾಕ್ಷಿ ಸದರಿ ದಾಖಲಾತಿ ಮೇಲೆ ಅವಶ್ಯಕ ಮುದ್ರಾಂಕ ಶುಲ್ಕ ಮತ್ತು ದಂಡ ಪಾವತಿ ಮಾಡುವುದಾಗಿ ಹೇಳಿರುತ್ತಾರೆ.
- 31 ಪಹಣಿಗಳನ್ನು ನಿಡಿ-1 ರಿಂದ 31 ಎಂದು,
- 2ಮುಟೇಷನ ರಿಜಿಸ್ಟರಗಳನ್ನು ನಿಡಿ-32 ಮತ್ತು 33 ಎಂದು,
- ಸಹಾಯಕ ಆಯುಕ್ತರು ಸೇಡಂ ರವರು ಮಾಡಿದ ಆದೇಶದ ದೃಢಿಕೃತ ನಕಲನ್ನು ನಿಡಿ-34 ಎಂದು,
- ದಿಃ 28-07-2015 ರಂದು ಸಹಾಯಕ ಆಯುಕ್ತರು ಸೇಡಂ ರವರು ನೀಡಿದ ಹಿಂಬರಹವನ್ನು ನಿಡಿ-35 ಎಂದು,
- ಸಹಾಯಕ ಆಯುಕ್ತರು ಸೇಡಂ ರವರ ಮುಂದೆ ಸಲ್ಲಿಸಿದ್ದ ಅರ್ಜಿಯ ದೃಢಿಕೃತ ನಕಲನ್ನು ನಿಡಿ-36 ಎಂದು,
- ಜಿಲ್ಲಾಧಿಕಾರಿಗಳು ಕಲಬುರಗಿ ರವರು ಮಾಡಿದ ಆದೇಶ ಪ್ರತಿಯನ್ನು ನಿಡಿ-37 ಎಂದು,
- ದಿಃ 12-08-2013 ರ ನೋಂದಾಯಿತ ರಿಲೀಜ್ ಡಿಡ್ ನ ದೃಢಿಕೃತ ನಕಲನ್ನು ನಿಡಿ-38 ಎಂದು ಗುರುತಿಸಲಾಯಿತು.

ಪ್ರಕರಣವನ್ನು ದಿಃ 19-07-1972 ರ ಕ್ರಯ ಪತ್ರದ ಮೇಲಿನ ಮುದ್ರಾಂಕ ಶುಲ್ಕ ಮತ್ತು ದಂಡ ನಿರ್ಧರಿಸಲು ಕಾಯ್ದಿರಿಸಲಾಯಿತು.

**(ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**